(ಗೊಂದಲ)

ಅಧ್ಯಕ್ಷರು : ಈಗ ಪ್ರಶ್ನೋತ್ತರ ಮತ್ತು ಇತರೆ ಕಲಾಪಗಳು ಆಗಲಿ. ನಾನು ಎಲ್ಲಾ ಪಕ್ಷಗಳ ಮುಖಂಡರನ್ನು ಒಂದೂವರೆ ಗಂಟೆಗೆ ಕರೆಯಬಹುದು. ಆನಂತರ lunch.

ಶ್ರೀ ಧರ್ಮಸಿಂಗ್ : ಚರ್ಚೆ ಮಾಡಿ, ಅವರು ಯಾವಾಗ ಮಾಡುತ್ತಾರೋ ಮಾಡಲಿ.

ಅಧ್ಯಕ್ಷರು : ಒಂದೂವರೆ ಗಂಟೆಗೆ ಸಭೆ ಕರೆದು, ಅರ್ಧ ಗಂಟೆ ಚರ್ಚೆ ಮಾಡಿ ಅವರು ಯಾರ ಜೊತೆ ಸಮಾಲೋಚನೆ ಮಾಡಬೇಕೋ ಮಾಡಿಕೊಳ್ಳಲಿ.

ಶ್ರೀ ಧರ್ಮಸಿಂಗ್ : ಏಕೆಂದರೆ ಐದನೇ ತಾರೀಖಿನಂದು ಅಧಿವೇಶನ ಮುಗಿಯುತ್ತದೆ. ಅಷ್ಟರೊಳಗೆ ಆಗಬೇಕು.

ಅಧ್ಯಕ್ಷರು : ಸ್ವಲ್ಪ ಕೇಳಿ ಸ್ವಾಮಿ. ಒಂದೂವರೆ ಗಂಟೆಗೆ ನಾನು ಮುಖಂಡರ ಸಭೆಯನ್ನು ಕರೆಯುತ್ತೇನೆ. ಅದಾದ ನಂತರ lunch ಇದೆ. ಅದಾದನಂತರ ಅವರು ಒಂದು ನಿರ್ಣಯಕ್ಕೆ ಬರಲಿ. ನಾವು ಒಂದು ದಿನ ಸಮಯ ಗೊತ್ತು ಮಾಡಿ ಮಾಡೋಣ. ಈಗ ಒಂದು ಪ್ರಕಟಣೆ ಇದೆ.

೨. ಪ್ರಕಟಣೆ

ವಿಧಾನ ಸಭಾ ಸದಸ್ಯರಾದ ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡವರು ಅನಾರೋಗ್ಯದಿಂದ ವಿಶ್ರಾಂತಿ ಪಡೆಯುತ್ತಿರುವುದರಿಂದ ದಿನಾಂಕ ೧೪.೩.೨೦೦೭ರಿಂದ ೦೫.೦೪.೨೦೦೭ ರವರೆಗೆ ಸದನಕ್ಕೆ ಗೈರು ಹಾಜರಾಗಲು ಅವರು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ. ಮಾನ್ಯ ಸದಸ್ಯರು ಗೈರು ಹಾಜರಾಗಲು ಸದನದ ಸಹಮತಿಯಿದೆ ಎಂದು ಭಾವಿಸಲಾಗಿದೆ. ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ ರವರು ಸದನಕ್ಕೆ ಗೈರು ಹಾಜರಾಗಲು ಅನುಮತಿ ನೀಡಲಾಗಿದೆ.

(ಗೊಂದಲ)

ಶ್ರೀ ಹೆಚ್.ಆಂಜನೇಯ : ಮಾನ್ಯ ಅಧ್ಯಕ್ಷರೇ ಒಂದು ನಿಮಿಷ ಅವಕಾಶ ಕೊಡಿ.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೇ ಅವರ ಬಗ್ಗೆ ಒಂದು ವಿಚಾರ ಹೇಳಬೇಕಾಗಿದೆ.

ಅಧ್ಯಕ್ಷರು : ಎಲ್ಲರೂ ಒಂದು ನಿಮಿಷ ಅಂದರೆ ಆಗುವುದುದಿಲ್ಲ. ಈಗ ಪ್ರಶ್ನೋತ್ತರ. ಇಲ್ಲಿ ಏನಾಗಿದೆ ಎಂದರೆ, ಬಹಳ ಗಂಭೀರವಾದ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿದರು ಎಂದರೆ, ನೀವು ಎಲ್ಲರುಗಳೂ ಸಹ ಯಾವ ನಿಯಮಗಳೂ ಇಲ್ಲದೆ ಒಂದು ನಿಮಿಷ ಒಂದು ನಿಮಿಷ ಎಂದು ಎದ್ದು ನಿಂತರೆ ಇದೇನಿದು ? ಇದೇನು ವಿಧಾನ ಸಭೆನೋ ಏನೋ ? ದಯಮಾಡಿ ಕುಳಿತುಕೊಳ್ಳಿ. ಈಗ ಪ್ರಶ್ನೋತ್ತರ. ಪ್ರಶ್ನೋತ್ತರವಾದ ಮೇಲೆ ಶೂನ್ಯವೇಳೆಯಲ್ಲಿ ಅವಕಾಶ ಕೊಡುತ್ತೇನೆ. ಈಗ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ತನ್ವೀರ್ ಸೇಠ್ : ಶಂಕರಲಿಂಗೇಗೌಡರವರ ಆರೋಗ್ಯದ ವಿಚಾರವಾಗಿ ಹೇಳಬೇಕಾಗಿದೆ.

ಅಧ್ಯಕ್ಷರು : ಕುಳಿತುಕೊಳ್ಳಿ. ಒಂದು ಸೆಕೆಂಡ್ ಒಂದು ಸೆಕೆಂಡ್ ಎಂದು ಹೇಳುತ್ತಿರಲ್ಲಾ ನೀವು ಯಾವ ಸೂಚನೆ ಕೊಟ್ಟಿದ್ದೀರಾ ? ಸೂಚನೆ ಕೊಡದೆ ನೀವು ಈ ರೀತಿ ಮಾಡುವುದು ಸರಿಯಾಗುವುದಿಲ್ಲ. ಪ್ರಶ್ನೋತ್ತರವಾದ ಮೇಲೆ ನೀವು ಸೂಚನೆ ಕೊಡಿ, ನಾನು ನಂತರ ಅವಕಾಶ ಕೊಡುತ್ತೇನೆ. ಸುಮ್ಮನೆ ಎಲ್ಲರೂ ನಿಂತು ಕೊಂಡರೆ ಹೇಗೆ ? ರೆಡ್ಡಿಯವರೇ ನೀವು ಪ್ರಶ್ನೆ ಕೇಳಿ.

೩. ಪ್ರಶ್ನೋತ್ತರಗಳು (ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು)

ಪ್ರಶ್ನೆ ಸಂಖ್ಯೆ : ೨೪೩೭

ಅಧ್ಯಕ್ಷರು : ರಾಯರೆಡ್ಡಿಯವರೇ, ಅವರು ೩೦ ದಿನಗಳ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಬಸವರಾಜ್ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ ನಾನು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಒದಗಿಸುವುದಕ್ಕೆ ೩೦ ದಿವಸಗಳ ಕಾಲ ಸಮಯವನ್ನು ಕೇಳಿದ್ದಾರೆ.